26

# ಪೌಲನ ನಾಲ್ಕು ವರ್ಷಗಳ ಸೆರೆಯವಾಸ

## ಕ್ರಿ.ಶ. 58-63 (ಅಪೊಸ್ತಲರ ಕೃತ್ಯಗಳು 21:27-28:31)

### I. ಯೆರೂಸಲೇಮಿನಲ್ಲಿ ಅವನು ಬಂಧಿಸಲ್ಪಟ್ಟದ್ದು. (ಅಪೊಸ್ತಲರ ಕೃತ್ಯಗಳು 21:27-23:30.)

ಯೆರೂಸಲೇಮಿನಲ್ಲಿಯ ಮತ್ತು ಕೈಸರಯದಲ್ಲಿಯ ಮುಂದಿನ ಎರಡು ವರ್ಷಗಳಲ್ಲಿಯ ಘಟನೆಗಳು ಪೌಲನ ಭಾಷಣಗಳ ಸರಣಿಯಲ್ಲಿ ಗುಂಪಾಗಿಡುವಂಥದ್ದು ಉತ್ತಮವಾಗಿದೆ.

**1. ಜನರ ಗುಂಪಿನ ಮುಂದೆ ಅವನ ಭಾಷಣ.**-ಜನರ ಗುಂಪು ಪೌಲನನ್ನು ಬೇಗನೇ ಮುಗಿಸಬಹುದಿತ್ತು, ಆದರೆ ಅವರು ಅವನನ್ನು ದೇವಾಲಯದಿಂದ ಹೊರಗೆ ಎಳೆದು ತಂದಾಗ, ಸಹಸ್ರಾಧಿಪತಿಯು ಸಿಪಾಯಿಗಳನ್ನೂ ಶತಾಧಿಪತಿಗಳನ್ನೂ ಕೂಡಿಕೊಂಡು ಬಂದು ಅವನನ್ನು ಉಳಿಸಿದನು. ಜನರ ಗುಂಪಿಗೆ ಮಾತನಾಡಲು ಅಪ್ಪಣೆ ತೆಗೆದುಕೊಂಡು, ಪೌಲನು ಅವರ ಭಾಷೆಯಲ್ಲಿ ಮಾತನಾಡಿದನು. ಮೆಟ್ಟಿಲುಗಳ ಮೇಲಿನ ಈ ಭಾಷಣವು ಪೌಲನ ಮಾರ್ಪಡುವಿಕೆಯ ವೃತ್ತಾಂತದ ಎರಡನೆಯ ವಿವರಣೆಯಾಗಿದೆ (ಹೋಲಿಸು ಅಪೊಸ್ತಲರ ಕೃತ್ಯಗಳು 9:1-18). ಯೆಹೂದ್ಯರಿಗೆ ಮಾತಾಡುವಲ್ಲಿ ಸ್ವಭಾವಿಕವಾಗಿದ್ದಂತೆ, ಅವನು ತನ್ನ ಹಿಬ್ರೂ ರಕ್ತ ಸಂಬಂಧವನ್ನು ಮತ್ತು ಶಿಕ್ಷಣವನ್ನು, ಕ್ರೈಸ್ತರಿಗೆ ವಿರುದ್ಧವಾಗಿದ್ದ ತನ್ನ ಅತ್ಯಾಸಕ್ತಿಯನ್ನು, ಅದರಿಂದ ತಾನು ಯೇಸುವಿನ ಶಿಷ್ಯನೂ ಅಪೊಸ್ತಲನೂ ಆದದ್ದನ್ನೂ ಒತ್ತಿ ಹೇಳಿದನು, ಅನ್ಯಜನಾಂಗದವರಿಗೆ ತನ್ನ ನಿಯೋಗದ ಬಗ್ಗೆ ಉಲ್ಲೇಖಿಸುವವರೆಗೆ ಅವರು ಕೇಳಿದರು, ಆಗ ಅಧಿಪತಿಯು ಅವನನ್ನು ಕೋಟೆಯೊಳಗೆ ತೆಗೆದುಕೊಂಡು ಹೋದನು. ಇಲ್ಲಿ ಪೌಲನು ತನ್ನ ರೋಮನ್ ನಾಗರಿಕತೆಯ (ಹಕ್ಕುದಾರಿಕೆ) ಮನವಿಮಾಡಿಕೊಳ್ಳುವುದರಿಂದ, ಹೊಡೆಯಲ್ಪಡುವುದನ್ನು ತಪ್ಪಿಸಿಕೊಂಡನು.

**2. ಹಿರೀ ಸಭೆಯ ಮುಂದೆ ಅವನ ಭಾಷಣ.**-ಮರುದಿನ, ಪೌಲನಿಗೆ ವಿರುದ್ಧವಾದ ದೂರುಗಳನ್ನು ತಿಳಿದುಕೊಳ್ಳಲು, ಅಧಿಕಾರಿಯು ಅವನನ್ನು ಯೆಹೂದಿ ಸನ್ಹೆಡ್ರಿನ್ ಸಭೆಯ ಮುಂದೆ ತಂದನು. ಪೌಲನು ಸಭೆಗೆ ಭಾಷಣ ಮಾಡಲು ಒಪ್ಪಿಕೊಂಡನು; ಆದರೆ ಅವನನ್ನು ಹೊಡೆಯ ಬೇಕೆಂದು ಮಹಾಯಾಜಕನು ಆಜ್ಞಾಪಿಸಿದ್ದು ಅವನು ಯಥಾರ್ಥವಾಗಿ ಕೇಳುವನೆಂಬ ನಿರೀಕ್ಷೆಯನ್ನು ಕಳೆದುಕೊಂಡನು. ಮಹಾ ಫರಿಸಾಯರ ಪುನರುತ್ಥಾನದ ಮೇಲಿನ ತತ್ವದ ಮೇಲೆ ಅವಲಂಬಿಸಿ, ಅದು ಸದ್ದುಕಾಯರಿಗೆ ಅಸಹ್ಯವಾಗಿತ್ತು, ತನ್ನ ಸ್ವಂತ ಗೋತ್ರದವರಾದ ಫರಿಸಾಯರಿಂದ ಸ್ವಲ್ಪ ಮೆಚ್ಚಿಕೆ ಪಡಕೊಂಡನು. ತಕ್ಷಣವೇ ಸಭೆಯು ಬಲವಾದ ವಾದವಿವಾದಗಳಲ್ಲಿ ತೊಡಗಿತು. ಪೌಲನನ್ನು ಉಳಿಸುವುದಕ್ಕಾಗಿ ಅಧಿಕಾರಿಯು ಅವನನ್ನು ಪುನಃ ಕೋಟೆಯೊಳಗೆ ತೆಗೆದುಕೊಂಡು ಹೋದನು. ಪೌಲನನ್ನು ಕೊಲ್ಲುವ ಒಂದು ಒಳಸಂಚು ಮಾಡಲ್ಪಟ್ಟಿದೆಯೆಂಬುದನ್ನು ಪೌಲನ ಚಿಕ್ಕಪ್ಪನ ಮಗನು ಅಧಿಕಾರಿಗೆ ಮರುದಿನ ತಿಳಿಸಿದನು. ರಾತ್ರಿಯಲ್ಲಿ ಅಧಿಕಾರಿಯು

ಸೈನಿಕರ ಸುರಕ್ಷಿತತೆಯಲ್ಲಿ ಪೌಲನನ್ನು ಕೈಸರಯಕ್ಕೆ ಕಳುಹಿಸಿದನು.

## II. ಕೈಸರಯದಲ್ಲಿ ಅವನು ಸೆರೆಯಲ್ಲಿದ್ದದ್ದು.
## (ಅಪೊಸ್ತಲರ ಕೃತ್ಯಗಳು 23:31-26:32.)

**1. ಫೇಲಿಕ್ಸನ ಮುಂದೆ ಅವನ ಪ್ರತಿವಾದ.**-ಪೌಲನ ವೈರಿಗಳನ್ನು ಸುಲಭವಾಗಿ ತೆಗೆದು ಕೊಳ್ಳಲ್ಪಡ ಲಿಕ್ಕಾಗುವುದಿಲ್ಲ. ಐದು ದಿನಗಳ ನಂತರ ಮಹಾಯಾಜಕನು ತೆರ್ತುಲ್ಲನೆಂಬ ಒಬ್ಬ ಪ್ರಸಿದ್ಧ ವಕೀಲನನ್ನು ಕರೆದುಕೊಂಡು ಬಂದು. ದೇಶಾಧಿಪತಿಯಿಂದ ಶಿಕ್ಷೆ ವಿಧಿಸಲ್ಪಡುವುದನ್ನು ಸ್ವೀಕರಿಸುವುದಕ್ಕೆ ಬಂದನು. ತೆರ್ತುಲ್ಲನು ಫೇಲಿಕ್ಸನನ್ನು ಹೊಗಳುತ್ತ ಪೌಲನನ್ನು ಘೂಷಿಸುತ್ತ ವಾದ ಪ್ರಾರಂಭಿಸಿದನು. ದೇಶಕ್ಕೆ ವಿರೋಧವಾಗಿ ಪ್ರಚೋದನೆ ಮಾಡಿದ್ದನ್ನು ಪೌಲನು ಅಲ್ಲಗಳೆದನು. ಆದರೆ ತಾನು ಪುನರುತ್ಥಾನದಲ್ಲಿ ನಂಬಿಕೆ ಇಟ್ಟವನೆಂದು ಪ್ರತಿಪಾದಿಸಿದನು. ಪೌಲನ ನಿರ್ದೋಷತ್ವದ ಬಗ್ಗೆ ಫೇಲಿಕ್ಸನಿಗೆ ದೃಢವಾಯಿತು ಆದರೆ ಯೆಹೂದ್ಯರ ದ್ವೇಷ ಕಟ್ಟಿಕೊಳ್ಳಬಾರದೆಂಬ ಉದ್ದೇಶದಿಂದ ವಿಚಾರಣೆಯನ್ನು ಮುಂದಕ್ಕೆ ಹಾಕಿದನು.

**2. ಫೇಲಿಕ್ಸನ ಮುಂದೆ ಅವನ ಪ್ರಸಂಗಗಳು.**-ಫೇಲಿಕ್ಸನ ಧ್ರುಸಿಲ್ಲಳನ್ನು ಮದುವೆಯಾಗಿದ್ದು. ಆಕೆ ಎಮೆಸಾದ ಅರಸನಾದ ಅಜಿಜಸನ ಹೆಂಡತಿಯಾಗಿದ್ದಳು. ಆಕೆ ಹೆರೋದ ಅಗ್ರಿಪ್ಪ Iನ ಮಗಳು. ಅವನು ಯಥಾರ್ಥವಾದ ಹೆರೋದನು. ಆಕೆಯ ಕುತೂಹಲವನ್ನು ತೃಪ್ತಿಪಡಿಸಲು, ಫೇಲಿಕ್ಸನು ತಮ್ಮ ಮುಂದೆ ಪ್ರಸಂಗಿಸಲು ಪೌಲನನ್ನು ಕರೆಕಳುಹಿಸಿದನು. ತನ್ನ ಸ್ವಂತ ಪ್ರಾಣವು ಗಂಡಾಂತರದಲ್ಲಿ ಇದ್ದರೂ, ಪೌಲನೂ ತನ್ನ ಖಂಡನೆಯನ್ನು ಫೇಲಿಕ್ಸನ ಮನಸಾಕ್ಷಿಯ ಮೇಲೆ ಹಾಕಿದನು. ಆ ಅಪರಾಧಿ ಜೋಡಗಳ ಮುಂದೆ ಮಿತಾಚಾರ, ನೀತಿ ಮತ್ತು ಬರಲಿಕ್ಕಿದ್ದ ನ್ಯಾಯತೀರ್ವಿಕೆಯ ಬಗ್ಗೆ ವಾದಿಸಿದನು. ಫೇಲಿಕ್ಸನು ತನ್ನ ಕೈದಿಯ ಮುಂದೆ ನಡುಗಿದನು, ಆದರೆ ಪೌಲನ ಬಿಡುಗಡೆಗಾಗಿ ಲಂಚ ಪಡೆಯುವ ನಿರೀಕ್ಷೆಯಿಂದ ಅವನನ್ನು ಹಿಂದೆ ಕಳುಹಿಸಿದನು. ಆಗಾಗ ಅವನ ಮಾತುಗಳನ್ನು ಕೇಳಿದನು, ಇದು ಸುವಾರ್ತೆಯನ್ನು ಕೇಳುವ ಉದ್ದೇಶದಿಂದಾಗಿರಲಿಲ್ಲ.

**3. ಫೆಸ್ತನ ಎದುರಿನಲ್ಲಿ ಅವನ ಪ್ರತಿವಾದ.**-ಎರಡು ವರ್ಷಗಳ ನಂತರ ಫೇಲಿಕ್ಸನು ತನ್ನ ತಪ್ಪು ಕಾರ್ಯಗಳಿಗಾಗಿ ಉತ್ತರ ಕೊಡಲು ರೋಮಿಗೆ ಕರೆಯಲ್ಪಟ್ಟನು ಮತ್ತು ಅವನು ಪೌಲನನ್ನು ಖೈದಿಯನ್ನಾಗಿಯೇ ಬಿಟ್ಟುಹೋದನು. ಅವನ ತರುವಾಯ ಫೆಸ್ತನು ಬಂದನು. ಯೆಹೂದ್ಯರು ಪೌಲನ ವಿಚಾರಣೆಯನ್ನು ಪುನಃ ಪ್ರಾರಂಭಿಸಲು ಒತ್ತಾಯಪಡಿಸಿದರು. ಮತ್ತು ಅವನನ್ನು ಯೆರೂಸಲೇಮಿಗೆ ಸಾಗಿಸಬೇಕೆಂದು ಕೇಳಿಕೊಂಡನು. ಪೌಲನು ಅವರ ದೂರುಗಳನ್ನು ಅಲ್ಲಗಳೆದನು; ಯೆರೂಸಲೇಮಿಗೆ ಹೋಗಬೇಕೆಂದು ಫೆಸ್ತನು ಸೂಚಿಸಿದ್ದಕ್ಕೆ, ಅದು ಸಿಂಹದ ದವಡೆಯೊಳಗೆ ಸಿಕ್ಕಿಕೊಳ್ಳುವದಾಗಿದೆ ಎಂಬುದನ್ನು ತಿಳಿದುಕೊಂಡು, *"ನಾನು ಕೈಸರನಿಗೆ ಮನವಿಮಾಡಿಕೊಳ್ಳುತ್ತೇನೆ"* ಎಂದು ಉತ್ತರ ಕೊಟ್ಟನು.[1]

"ಚಕ್ರವರ್ತಿಯ ಬಳಿಗೆ ಹೋಗಬೇಕು"[2] ಎಂದು ಫೆಸ್ತನು ಉತ್ತರಕೊಟ್ಟನು.

ಎರಡು ವರ್ಷಗಳ ಮೊದಲು, ಕೊರಿಂಥದಲ್ಲಿದ್ದಾಗ, ಪೌಲನು ಇನ್ನೂ ಹೆಚ್ಚಿನ ಸುವಾರ್ತಾ ಸೇವೆಮಾಡವ ಉದ್ದೇಶವನ್ನು ಕೂಡಿಸಿದ್ದನು. ಅವನ ಯೋಜನೆಯು ರೋಮಿಗೆ ಹೋಗುವುದು ಮತ್ತು ಅನಂತರ ಸ್ಪೇನಿಗೆ ಹೋಗುವುದು ಆಗಿತ್ತು (ರೋಮಾಪುರ 15:23, 24). ಮತ್ತೊಮ್ಮೆ ಮನುಷ್ಯರ ದುಷ್ಟತ್ವವು ದೇವರ ಯೋಜನೆಗಳೊ ಂದಿಗೆ ಸಹಕರಿಸುತ್ತದೆ. ತಾನು ನಿರೀಕ್ಷಿಸಿದಂತೆ ಆಗಿರದಿದ್ದರೂ, ಪೌಲನು ರೋಮಿಗೆ

ಹೋಗಬೇಕಾಗಿತ್ತು.

**4. ಅಗ್ರಿಪ್ಪನ ಎದುರಿನಲ್ಲಿ ಅವನ ಭಾಷಣ.**-ಪೌಲನ ವಿಷಯವು ಫೆಸ್ತನಿಗೆ ಗಲಿಬಿಲಿಗೊಳಿಸುವಂಥದ್ದಾಗಿತ್ತು. ಅವನು ಕೈಸರನ ಬಳಿಗೆ ಕಳುಹಿಸಲ್ಪಡಬೇಕಾಗಿತ್ತು. ಆದಾಗ್ಯೂ ದೇಶಾಧಿಪತಿಗೆ ತನ್ನ ಖೈದಿಯ ವಿರುದ್ಧವಾಗಿ ನಿಶ್ಚಿತವಾದ ಅಪವಾದಗಳು ಇರಲಿಲ್ಲ. ಯೆಹೂದ್ಯರ ದೂರುಗಳು ಯೆಹೂದಿ ಆಚಾರ ಪದ್ಧತಿಗಳಿಗೆ ಸಂಬಂಧಿಸಿದ್ದು ಅವುಗಳ ಬಗ್ಗೆ ಅವನಿಗೆ ಪರಿಚಯ ವಿರಲಿಲ್ಲ. ಈ ಸಮಯದಲ್ಲಿ ಹೆರೋದ ಅಗ್ರಿಪ್ಪ II. ಕೈಸರಯಕ್ಕೆ ನೂತನ ರಾಜ್ಯಪಾಲನನ್ನು ಅಭಿನಂದಿಸಲು ಬಂದನು. ಅಗ್ರಿಪ್ಪನು ಅವನ ಸ್ವಂತ ತಂಗಿ ಬೆರ್ನೈಸಲೊಂದಿಗೆ ಜೀವಿಸುತ್ತಿದ್ದನು. ಆಕೆ ತನ್ನ ಸಹೋದರಿ ಧ್ರುಸಿಲ್ಲಳಂತೆ ಸುಂದರಳೂ ಬುದ್ಧಿವಂತಳೂ ಸ್ವೇಚ್ಛಾಚಾರಿಯು ಆಗಿದ್ದಳು. ಅಗ್ರಿಪ್ಪನು ಯೆಹೂದ್ಯನಾಗಿದ್ದನು, ಪೌಲನ ವಿಷಯದಲ್ಲಿ ಆಸಕ್ತಿಯನ್ನು ವ್ಯಕ್ತಪಡಿಸಿದನು. ಅವನ ಮುಂದೆ ಮಾತಾಡಲು ಪೌಲನು ಕರೆಕಳುಹಿಸಲ್ಪಟ್ಟನು. ಅಂಥವರ ಮುಂದೆ ಅವನು ಎಂದೂ ಮಾತನಾಡಿದ್ದಿಲ್ಲ: ಒಬ್ಬನು ರೋಮನ್ ರಾಜ್ಯಪಾಲ, ಇಬ್ಬರು ಸರ್ಪಜಾತಿಯ ಹೆರೋದರು, ಅಗ್ರಿಪ್ಪ ಮತ್ತು ಅವನ ಸಹೋದರಿ - ಹೆಂಡತಿ, ಬೆರ್ನಿಸ್; ಅವರೊಂದಿಗೆ ರೋಮ್ ರಾಜಧಾನಿಯು ಮುಖ್ಯ ಸೇನೆಯ ಹಾಗೂ ನಾಗರಿಕ ಅಧಿಕಾರಿಗಳು. ಪುನಃ ಪೌಲನು ತಾನು ಕ್ರೈಸ್ತರನ್ನು ಹಿಂಸಿಸಿದ ಮತ್ತು ತಾನು ಮಾರ್ಪಾಟು ಹೊಂದಿದ್ದಕ್ಕೆ ಸಬಂದಿಸಿದ್ದನ್ನು ವಿವರಿಸುತ್ತಾನೆ, ಅವನು ಯೆಹೂದ್ಯನಾದ ಅಗ್ರಿಪ್ಪನ ಕಡೆಗೆ ಗಮನಹರಿಸಿದ್ದನು. ಅವನ ಕೇಂದ್ರ ಉದ್ದೇಶವು ಸುವಾರ್ತೆಯು ದೇವರಿಂದ ಬಂದದ್ದು, ಅದು ಯೆಹೂದಿ ಪರಿಶುದ್ಧ ಬರಹಗಳನ್ನು ನೆರವೇರಿಸುವುದು ಎಂಬುದನ್ನು ತೋರಿಸುವುದಾಗಿತ್ತು. ಅನ್ಯನಾಗಿದ್ದ ಫೆಸ್ತನು, ಪೌಲನು ತನ್ನ ಆಸಕ್ತಿಯಿಂದ ಹುಚ್ಚನಾಗಿದ್ದಾನೆಂದು ಹೇಳಿ ಮಧ್ಯದಲ್ಲಿ ಮಾತಾಡುವುದನ್ನು ತಡೆಹಿಡಿದನು. ಕ್ರೈಸ್ತನಾಗುವುದರ ಬಗ್ಗೆ ಅಗ್ರಿಪ್ಪನು ಹಾಸ್ಯಸ್ಪದವಾಗಿ ಮಾತಾಡಿದನು. ಪೌಲನು ಸುಂದರವಾದ ಅಪೇಕ್ಷೆಯೊಂದಿಗೆ ಮುಕ್ತಾಯಗೊಳಿಸಿದನು; ಕಿರೀಟಗಳೂ ನಿಲುವಂಗಿಗಳೂ ಐಶ್ವರ್ಯವೂ ಅವನಿಗೆ ಮಹತ್ವದವುಗಳಲ್ಲ, ಆಮೇಲೆ ಬೇಡಿಗಳಿದ್ದ ತನ್ನ ಕೈಗಳನ್ನು ಮೇಲಕ್ಕೆತ್ತಿ "ಈ ಬೇಡಿಗಳ ಹೊರತು"[3] ಎಲ್ಲರೂ ತನ್ನಂತಾಗಬೇಕೆಂದು ಹೇಳಿದನು. ಲೋಕದ ಈ ತಣ್ಣಗಾದ ಜನರು ಸುವಾರ್ತೆಯ ಬಲವನ್ನು ವಿರೋಧಿಸಬಹುದು, ಆದರೆ ಅವರು ಪೌಲನ ಪ್ರತ್ಯಕ್ಷವಾದ ಧೈರ್ಯವನ್ನೂ ಪ್ರಮಾಣಿಕತೆಯನ್ನೂ ಗೌರವಿಸದೇ ಇರಲಾರರು. "ಈ ಮನುಷ್ಯನು ಚಕ್ರವರ್ತಿಯ ಎದುರಿನಲ್ಲಿ ಹೇಳಿಕೊಳ್ಳುತ್ತೇನೆಂದು ಹೇಳದೇ ಹೋಗಿದ್ದರೆ ಇವನನ್ನು ಬಿಡಬಹುದಾಗಿತ್ತು"[4] ಎಂಬುದು ಅವರ ತೀರ್ಮಾನವಾಗಿತ್ತು.

## III. ರೋಮಾಪುರಕ್ಕೆ ಸಮುದ್ರ ಪ್ರಯಾಣ.
## (ಅಪೊಸ್ತಲರ ಕೃತ್ಯಗಳು 27:1-28:15.)

**1. ಹಡಗು ಮತ್ತು ಜೊತೆಯವರು.**-ಕ್ರಿ.ಶ. 60ರ ಬೇಸಿಗೆಯ ಕೊನೆಯಲ್ಲಿ ಅದ್ರಮಿತ್ತಿಯದಿಂದ ಕರಾವಳಿಯ ಸ್ಥಳಗಳಿಗೆ ಹೋಗುತ್ತಿದ್ದ ಹಡಗಿನಲ್ಲಿ ಪೌಲನು ಕೈಸರಯದಿಂದ ಪ್ರಯಾಣ ಮುಂದರಿಸಿದನು. ಇಬ್ಬರು ಸ್ನೇಹಿತರು ಅವನ ಜೊತೆಗೂಡಿದರು. ಎರಡು ವರ್ಷಗಳ ಮೊದಲು, ಅವನು ಫಿಲಿಪ್ಪಿಯನ್ನು ಬಿಟ್ಟನಂತರ ಲೂಕನು ಅವನೊಂದಿಗೆ ಉಳಿದುಕೊಂಡಿರುವಂತೆ ಕಾಣುತ್ತದೆ. ಪೌಲನು ಕೈಸರಯದಲ್ಲಿ ಸೆರೆಯಲ್ಲಿದ್ದಾಗ ಲೂಕನು ತನ್ನ ಸುವಾರ್ತೆಯನ್ನು ಬರೆದಿರುವ ಸಾಧ್ಯತೆಯಿದೆ. ಜೊತೆ ಸೆರೆಯವನಾಗಿ ಅರಿಸ್ತಾರ್ಕನೂ ಸಹ ಪೌಲನೊಂದಿಗಿದ್ದನು (ಹೋಲಿಸು ಅಪೊಸ್ತಲರ ಕೃತ್ಯಗಳು

19:29; 20:4; 27:2; ಕೊಲೊಸ್ಸೆ 4:10), ಅವನು ಯಾವ ಅಪರಾಧಕ್ಕಾಗಿ ಸೆರೆಯಲ್ಲಿದ್ದನೆಂಬುದು ತಿಳಿದಿರುವುದಿಲ್ಲ. ಇತರ ಸೆರೆಯವರೂ ಅವನೊಂದಿಗಿದ್ದರು; ಅವರೆಲ್ಲರೂ ಶತಾಧಿಪತಿ ಜೂಲಿಯಸನ ಅಧೀನತೆಯಲ್ಲಿದ್ದರು.

**2. ಮುರಕ್ಕೆ ಓಟ.**-ಫೊಯನಿಕ್ಯದ ಸಮುದ್ರದ ದಡದಗುಂಟ ಮುನ್ನಡೆದ ಹಡಗವು ಸೀದೋನನ್ನು ತಲುಪಿತು. ಅಲ್ಲಿ ಪೌಲನು ತನ್ನ ಸ್ನೇಹಿತರೊಂದಿಗೆ ವಿಶ್ರಮಿಸಲು ಶತಾಧಿಪತಿಯು ಅಪ್ಪಣೆ ಕೊಟ್ಟನು. ಸೀದೋನಿನಿಂದ ಅದ್ರಮಿತ್ತಿಗೆ ಬಲಗಡೆಗೆ ಕುಪ್ರದಿಂದ ಹೋಗಬಹುದಿತ್ತು; ಆದರೆ ಅನಾನುಕೂಲ ಗಾಳಿಗಳಿಂದ ಅವರು ಕುಪ್ರ ಮತ್ತು ಮುಖ್ಯನಾಡಿನ ಮಧ್ಯದಲ್ಲಿ ಅವರು ಹೋದರು. ಮುರಾದಲ್ಲಿ ಚಿಕ್ಕ ಆಸಿಯಾದ ನೆರುತ್ಯ ದಡದಲ್ಲಿ, ರೋಮಕ್ಕೆ ಹೋಗುತ್ತಿದ್ದ ಅಲೆಕ್ಸಾಂದ್ರಿಯನ್ ಧಾನ್ಯದ ಹಡಗನ್ನು ಕಂಡುಕೊಂಡರು ಮತ್ತು ಪ್ರಮುಖ ಪಟ್ಟಣಕ್ಕಾಗಿ ಅದರಲ್ಲಿ ಪುನಃ ಏರಿದರು.

**3. ಮಹಾ ಬಿರುಗಾಳಿ.**-ನಿಧಾನವಾಗಿ ಸಮುದ್ರ ದಡದಲ್ಲಿ ಕ್ನೀದದ ವರೆಗೆ ಬಂದಾಗ, ಫಕ್ಕನೇ ದಕ್ಷಿಣಕ್ಕೆ ಕ್ರೇತದ್ವೀಪದ ಕಡೆಗೆ ತಿರುಗಬೇಕಾಯಿತು. ದಕ್ಷಣ ದಡದಲ್ಲಿ ಚಂದರೇವುಗಳೆಂಬ ಬಂದರದೊಳಗೆ ಸೇರಿದರು. ಬಹಳ ಸಮಯವು ಕಳೆದು ಹೋದದ್ದರಿಂದ ಸಮುದ್ರಯಾನವನ್ನು ಮುಂದೆ ಹಾಕಬೇಕೆಂದು ಪೌಲನು ಸೂಚಿಸಿದನು; ಆದರೆ ಹಡಗಿನ ಯಜಮಾನನ ಸಲಹೆಯಂತೆ ಅವರು ಪ್ರಯಾಣ ಮುಂದರಿಸಿದರು. ಹದಿನಾಲ್ಕು ದಿನ ಬಿರುಗಾಳಿಯಲ್ಲಿ ಸಿಲುಕಿ ಸಹಾಯವಿಲ್ಲದೆ ಮುಂದೊಯ್ಯಲ್ಪಟ್ಟು. ಪೌಲನನ್ನು ಬಿಟ್ಟು ಎಲ್ಲರೂ ನಿರೀಕ್ಷೆಯನ್ನು ಕಳೆದುಕೊಂಡರು. ದೇವರಿಂದ ಒಂದು ರಾತ್ರಿಯ ದರ್ಶನವು ಹಡಗು ಒಡೆವರೂ ಎಲ್ಲರೂ ಉಳಿದುಕೊಳ್ಳುವುದರ ಬಗ್ಗೆ ಭರವಸೆಕೊಟ್ಟಿತು. ಮೆಲೀತೆ (ಮಾಲ್ಟ) ದ್ವೀಪದ ಬಳಿಯಲ್ಲಿ ಹೀಗಾಯಿತು. ದಡಕ್ಕೆ ಸಮೀಪದಲ್ಲಿದ್ದಾಗ, ಇನ್ನೂರಿಪ್ಪತಾರು ಜನರು ದಡಕ್ಕೆ ಈಜಿಕೊಂಡು ಹೋದರು. ಇಲ್ಲವೇ ಒಡೆದ ಹಡಗಿನ ತುಂಡುಗಳ ಮೇಲಿಂದ ದಡ ಸೇರಿದರು.

**4. ಮೆಲೀತೆಯಲ್ಲಿ ಚಳಿಗಾಲ.**-ಸ್ಥಳಿಕರು ಅಸಾಮಾನ್ಯವಾದ ದಯೆಯನ್ನು ತೋರಿಸಿದರು. ಚಳಿಯಿಂದ ಇದ್ದ ಸಮುದ್ರ ಪ್ರಯಾಣಕರಿಗಾಗಿ ಬೆಂಕಿಯನ್ನು ಉರಿಸುತ್ತಿದ್ದರು. ಹಡಗಿನ ಮೇಲಿನ ಪ್ರಭಾವವು ಪೌಲನಿಗಾಗಿ ಗಮನಾರ್ಹವಾದದ್ದಾಯಿತು. ಭೂಮಿಯ ಮೇಲೆ ತನ್ನನ್ನು ಉಪಯುಕ್ತನನ್ನಾಗಿ ಮಾಡಿಕೊಂಡನು. ಬೆಂಕಿಗಾಗಿ ಕಟ್ಟಿಗೆಗಳನ್ನು ಕೂಡಿಸಿದನು; ರಾಜ್ಯಪಾಲ ಪೊಪ್ಲಿಯಸ್‌ನ ತಂದೆಯನ್ನು ಗುಣಪಡಿಸಿದನು. ಅನೇಕರು ಅವನ ಬಳಿಗೆ ತರಲ್ಪಟ್ಟರು. ಪೌಲನು ಬಿಟ್ಟುಹೋಗುವ ಸಮಯದಲ್ಲಿ ಅವಶ್ಯವಾದ ಪದಾರ್ಥಗಳನ್ನು ಅವರು ತಂದು ಹಡಗಿನಲ್ಲಿಟ್ಟರು.

**5. ಸಮುದ್ರ ಪ್ರಯಾಣದ ಮುಕ್ತಾಯ.**-ಇನ್ನೊಂದು ಅಲೆಕ್ಸಾಂದ್ರಿಯದ ಸರಕು ಹಡಗಿನಲ್ಲಿ, ಅದು ದ್ವೀಪದಲ್ಲಿ ಚಳಿಗಾಲವನ್ನು ಕಳೆದಿತ್ತು, ಪ್ರಯಾಣಮಾಡಿ ಅವರು ಸುರಕೂಸು ಪಟ್ಟಣವನ್ನು ಅನಂತರ ರೇಗಿಯಮ್‌ನ್ನು ತಲುಪಿದರು. ಅಂತಿಮವಾಗಿ ನೇಪಲ್ಸ ಬಂದರಿನಲ್ಲಿ ಪೊತಿಯೋಲಿಯನ್ನು ತಲುಪಿದರು. ಪೊತಿಯೋಲಿಯು ಅಲೆಕ್ಸಾಂದ್ರಿಯನ್ ವ್ಯಾಪಾರಿ ಹಡಗುಗಳ ಬಂದರವಾಗಿತ್ತು. ಇನ್ನೊಂದು ತಿಬೇರಿಯದ ಬಳಿಯ ಓಸ್ತಿಯಾ ಆಗಿತ್ತು. ಇಲ್ಲಿ ಪೌಲನು ಶಿಷ್ಯರನ್ನು ಕಂಡುಕೊಂಡನು. "ರಸ್ತೆಗಳ ರಾಣಿ" ಮೇಲಿನಿಂದ ಅವನು ಅಪ್ಪಿಯ ಪೇಟಿಯವರೆಗೆ ಹೋದನು. ರೋಮಿನಲ್ಲಿಯ ಸಹೋದರರು ಅವನ ಬರುವಿಕೆಯ ಬಗ್ಗೆ ತಿಳಿದುಕೊಂಡು ಅವನನ್ನು ಸಂದರ್ಶಿಸಲು ಅಪ್ಪಿಯ ಮಾರ್ಕೆಟಿಗೂ ತ್ರಿಛತ್ರವೆಂಬ ಸ್ಥಳಕ್ಕೂ ಬಂದರು. ಅವನು ಖೈದಿಯಾಗಿದ್ದರೂ, ಪೌಲನು ಜಯದ ಮೆರವಣಿಗೆಯಲ್ಲಿ ರೋಮನ್ನು ತಲುಪಿದನು.

## IV. ರೋಮಿನಲ್ಲಿ ಎರಡು ವರ್ಷಗಳ ಸೆರೆಯವಾಸ.
## (ಅಪೊಸ್ತಲರ ಕೃತ್ಯಗಳು 28:16-31.)

**1. ಯೆಹೂದ್ಯರೊಂದಿಗೆ ಪೌಲನ ಸಂದರ್ಶನ.**-ಪೌಲನು ಅನ್ಯ ಜನಾಂಗದವರಿಗೆ ಅಪೊಸ್ತಲನಾಗಿ ಕರೆಯಲ್ಪಟ್ಟಿದ್ದನು. ಆದಾಗ್ಯೂ ಅವನ ಮೊದಲನೆಯ ಸಂದೇಶವು ಅವನ ಯೆಹೂದಿ ಸಹೋದರರಿಗೆ ಕೊಡಲ್ಪಡುತ್ತಿತ್ತು. ಆದುದರಿಂದ ಪಟ್ಟಣದಲ್ಲಿ ಸಾವಿರಾರು ಜನ ಯೆಹೂದ್ಯರೊಳಗಿಂದ ಅವರ ನಾಯಕರುಗಳನ್ನ ಕೂಡಲೇ ಕರೆಕಳು ಹಿಸಿದನು. ಎರಡನೆಯ ಕೂಟದಲ್ಲಿ, ಮುಂಜಾನೆಯಿಂದ ಸಂಜೆಯವರೆಗೆ, ದೇವರ ರಾಜ್ಯದ ವಿಷಯಗಳನ್ನು ಅವರಿಗೆ ತಿಳಿಸಿದನು. ಪರಿಣಾಮವು, ಬೇರೆ ಕಡೆಗಳಲ್ಲಿ ಆದಂತೆ, ಕೆಲವರು ನಂಬಿದರು, ಹೆಚ್ಚಾದವರು ಕ್ರಿಸ್ತನನ್ನು ತಿರಸ್ಕರಿಸಿದರು; ಮತ್ತು ಬೇರೆಕಡೆಗ ಳಲ್ಲಿಯಂತೆ. ಪೌಲನು ಅನ್ಯರ ಕಡೆಗೆ ತಿರುಗಿದನು.

**2. ರೋಮಿನಿಂದ ಪೌಲನ ಪತ್ರಿಕೆಗಳು.**-ತನ್ನ ಪ್ರಥಮ ರೋಮನ್ ಸೆರೆವಾಸದ ಸಮಯದಲ್ಲಿ, ಪೌಲನು ಕನಿಷ್ಠಪಕ್ಷ ನಾಲ್ಕು ಪತ್ರಿಕೆಗಳನ್ನು ಬರೆದನು, ಅಂದರೆ.:

*a. ಎಫೆಸದವರಿಗೆ, ಕೊಲೊಸ್ಸೆಯವರಿಗೆ ಮತ್ತು ಫಿಲೆಮೋನನಿಗೆ.*-ಇದಕ್ಕಾಗಿ ಪುರಾವೆಯು (1) ಎಫೆಸದವರಿಗೆ ಮತ್ತು ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಗಳು ತುಖಿಕನಿಂದ ಒಯ್ಯಲ್ಪಟ್ಟವು (ಎಫೆಸ 6:21, 22; ಕೊಲೊಸ್ಸೆ 4:7, 8). (2) ಫಿಲೆಮೋನನಿಗೆ ಬರೆದ ಪತ್ರಿಕೆಯು ಒನೆಸೀಮನಿಂದ ಒಯ್ಯಲ್ಪಟ್ಟಿತು (ಫಿಲೆಮೋನ 10-12). (3) ಅವರಿಬ್ಬರು ಜೊತೆಯಾಗಿ ಪ್ರಯಾಣಮಾಡಿದರು (ಕೊಲೊಸ್ಸೆ 4:7-9). (4) ಪೌಲನು ಸೆರೆಮನೆಯಲ್ಲಿದ್ದನು (ಎಫೆಸ 3:1). (5) ಅವನ ಕೇವಲ ದೀರ್ಘವಾದ ಸೆರೆಯವಾಸಗಳು ಕೈಸರಯ ಮತ್ತು ರೋಮ್ ಆಗಿದ್ದವು. ಆಮೇಲೆ ಅವನು ರೋಮಿಗೆ ಹೋಗಲಿಕ್ಕಿದ್ದನು; ಈಗ ಅವನು ಬಿಡುಗಡೆ ಮಾಡಲ್ಪಡುವುದನ್ನು ಮತ್ತು ಫಿಲೆಮೋನನ್ನು ಸಂದರ್ಶಿಸುವುದನ್ನು ನಿರೀಕ್ಷಿಸಿದನು (ಫಿಲೆಮೋನ 22).

*b. ಫಿಲಿಪ್ಪಿಯವರಿಗೆ.*-ಅರಮನೆಯ ಪಹರೆಯವರ ಬಗ್ಗೆ ಅವನು ಹೇಳಿದ್ದು ಅವನು ರೋಮ್‌ದಿಂದ ಬರೆದನೆಂಬುದನ್ನು ತೋರಿಸುತ್ತದೆ (1:13).

*c. ಇಬ್ರಿಯರಿಗೆ ಬರೆದ ಪತ್ರಿಕೆ.*-ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನ ಬಗ್ಗೆ ಸಂಶಯವಿರುತ್ತದೆ, ಅದು ಪೌಲನಿಂದಾಗಿದ್ದರೆ, ಬಹುಶಃ ಇದೇ ಅವಧಿಯಲ್ಲಿ ಬರೆಯಲ್ಪಟ್ಟಿತು.

**3. ರೋಮಿನಲ್ಲಿ ಪೌಲನ ಸುವಾರ್ತಾಸೇವೆಯ ಕಾರ್ಯಗಳು.**-ರೋಮಿನಲ್ಲಿ ಪೌಲನು ಬಂಧನ ದಲ್ಲಿ ಇಡಲ್ಪಟ್ಟಿರಲಿಲ್ಲ. ಅವನು ಬಾಡಿಗೆಗೆ ತೆಗೆದುಕೊಂಡ ಮನೆಯಲ್ಲಿ ವಾಸಿಸಿದನು. ಹಾಗೂ ತನ್ನ ಬಳಿಗೆ ಬಂದವರನ್ನೆಲ್ಲ ಸ್ವೀಕರಿಸಿದನು, ಆದರೆ ಅವನು ಹಗಲೂ ರಾತ್ರಿ ಒಬ್ಬ ಸೈನಿಕನ ಕಾವಲಲ್ಲಿ ಇರುತ್ತಿದ್ದನು. ಅವನ ಬೇಡಿಗಳು ಆತ್ಮಗಳಿಗಾಗಿರುವ ಅವನ ಕ್ರಿಸ್ತನಂತಿರುವ ಏಕಾಗ್ರತೆಯನ್ನು ತಣ್ಣಗಾಗಿಸಲಿಲ್ಲ. ಈ ಅವಧಿಯ ಪತ್ರಿಕೆಗಳು ಫಲಭರಿತ ಶ್ರಮೆಗಳಿಗೆ ಬಹಳವಾಗಿ ಸಾಕ್ಷಿಕೊಡುತ್ತವೆ. ಸುವಾರ್ತೆಯ ಪ್ರಸಾರಣೆಗಾಗಿ ಅವನ ಬಂಧನಗಳು ಬಿದ್ದುಹೋದವು (ಫಿಲಿಪ್ಪಿ 1:12); ಕೈಸರನ ಮನೆಯಲ್ಲಿಯೂ ಮಾರ್ಪಾಟ ಹೊಂದಿದವರು ಗೆಲ್ಲಲ್ಪಟ್ಟರು (ಫಿಲಿಪ್ಪಿ 4:22), ಪ್ರಸಿದ್ಧ ಅರಮನೆಯ ಕಾವಲು ಸೈನಿಕರಲ್ಲಿಯೂ ಗೆಲ್ಲಲ್ಪಟ್ಟರು (ಫಿಲಿಪ್ಪಿ 1:13), ಅವರಲ್ಲಿ ಬಹು ದೊಡ್ಡ ಸಂಖ್ಯೆಯವರೂ ಖೈದಿಯೊಂದಿಗೆ ಬೇಡಿ ಹಾಕಲ್ಪಟ್ಟಿರಬಹುದು, ಅವನ ಸುತ್ತಲೂ ಆಸಕ್ತಿ ಯುಳ್ಳ ಸೇವಕರು ಕೂಡಿಸಲ್ಪಟ್ಟದ್ದನ್ನು ನಾವು ನೋಡುತ್ತೇವೆ. ಅವರ ಮೂಲಕವಾಗಿ ಅವನು ಎಷ್ಟೋ ಹೆಚ್ಚಾದವರನ್ನು ಕೂಡಿಸಿಕೊಂಡನು. ಅವರಲ್ಲಿ *ತಿಮೊಥೆ, ಲೂಕ,*

*ಅರಿಸ್ತಾರ್ಕ ಮತ್ತು ಎಪಫ್ರ* ಹಾಗೂ ಮೊದಲಿನ ದಿನಗಳಲ್ಲಿ "ಅವನೊಂದಿಗೆ ಸೇವೆ ಮಾಡಲು ಹೋಗದಿದ್ದ" *ಮಾರ್ಕ*[5] ಇದ್ದರು. ಜಗತ್ತಿನ ಮಹಾ ರಾಜಧಾನಿಯಲ್ಲಿ ಪೌಲನು ಸುವಾರ್ತೆಯನ್ನು ವಿಶಾಲವಾದ ಮತ್ತು ದೃಢವಾದ ಅಸ್ತಿವಾರಗಳ ಮೇಲೆ ನೆಡುವದರೊಂದಿಗೆ, ಅಲ್ಲಿಂದ ಅದು ಸಾಮ್ರಾಜ್ಯದ ದೂರದ ಪ್ರದೇಶಗಳನ್ನು ತಲುಪುವಲ್ಲಿ, ಲೂಕನ ಕಥೆಯು ಮುಗಿಯುತ್ತದೆ.

---
ಟಿಪ್ಪಣಿಗಳು

[1]ಅಪೊಸ್ತಲರ ಕೃತ್ಯಗಳು 25:11. [2]ಅಪೊಸ್ತಲರ ಕೃತ್ಯಗಳು 25:12. [3]ಅಪೊಸ್ತಲರ ಕೃತ್ಯಗಳು 26:29. [4]ಅಪೊಸ್ತಲರ ಕೃತ್ಯಗಳು 26:32. [5]ಅಪೊಸ್ತಲರ ಕೃತ್ಯಗಳು 15:38.

© 2009 Truth for Today